**ಸಾಕ್ಷಿಯನ್ನು ದಿಃ *<u>05/04/2022</u>* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಅನುಮತಿಯ ಮೇರೆಗೆ ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ನಂ.5, 10 ಮತ್ತು 21 ರ ಪರ ವಕೀಲರಿಂದ.**

ಬ್ಯಾಂಕಿನವರು 13 ನೇ ಪ್ರತಿವಾದಿಗೆ ಸಂಬಂಧಿಸಿದ ಬ್ಯಾಂಕ ಖಾತೆ ಹಾಗೂ ಎಫಡಿಗಳ ಬಗ್ಗೆ ದಾಖಲೆಗಳನ್ನು ನೀಡಿದ್ದು, ನಾನು ಅವುಗಳನ್ನು ನೋಡಿಲ್ಲ. ನನಗೆ 2005 ರ ಪೂರ್ವದಲ್ಲಿ 13 ನೇ ಪ್ರತಿವಾದಿಯ ಎಲ್ಲ ವ್ಯವಹಾರಗಳು ಕೆನರಾ ಬ್ಯಾಂಕ ಜೊತೆಗೆ ಇದ್ದವು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿದಾರರಿಗೆ ಕಾರ್ಪೋರೇಷನ ಬ್ಯಾಂಕಿನವರು ನೀಡಿದ ಬ್ಯಾಂಕ ಸ್ಟೇಟಮೆಂಟ ತೋರಿಸಲಾಗಿ ಹಾಗೂ ಯಾರ ಹೆಸರಿನಲಿಲರುತ್ತದೆ ಎಂದು ಕೇಳಿದಾಗ ಸಾಕ್ಷಿದಾರರು 13 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದು ಹೇಳುತ್ತಾರೆ. ಸದರಿ ದಾಖಲೆಯನ್ನು (ಸಂಪೂರ್ಣ ಅಕೌಂಟ ಸ್ಟೇಟಮೆಂಟ) ***<u>ನಿ.ಡಿ.11</u>*** ಎಂದು ಗುರುತಿಸಲಾಯಿತು. ಸದರಿ ಸ್ಟೇಟಮೆಂಟನಲ್ಲಿ ಅವುಗಳಲ್ಲಿ ಇದ್ದಂತಹ ಮೊತ್ತ ಮತ್ತು ಬಡ್ಡಿ ನಮೂದು ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ಬ್ಯಾಂಕ ಮ್ಯಾನೇಜರ ಇವರು 2016 ನೇ ಇಸ್ವಿಗೆ ಸಂಬಂಧಿಸಿದ 13 ನೇ ಪ್ರತಿವಾದಿಯ ಅಕೌಂಟ ಡಿಟೆಲ್ಸ ನೀಡಿದ್ದು, ಸದರಿ ದಾಖಲೆಗಳನ್ನು ಸಾಕ್ಷಿದಾರರಿಗೆ ತೋರಿಸಲಾಗಿ ಅವರು ಅದನ್ನು ಒಪ್ಪಿಕೊಂಡ ಕಾರಣ ಸದರಿ ದಾಖಲೆಗಳನ್ನು ***<u>ನಿ.ಡಿ.12</u>*** ಎಂದು ಗುರುತಿಸಲಾಯಿತು. ಸದರಿ ದಾಖಲೆಗಳ ಪ್ರಕಾರ ಸುಮಾರು 25-30 ಲಕ್ಷ ರೂಪಾಯಿಗಳ ವ್ಯವಹಾರವಿರುತ್ತದೆ ಎಂದರೆ ಸಾಕ್ಷಿದಾರರು ಇರಬಹುದು ಹೇಳುತ್ತಾರೆ. ಸದರಿ ಖಾತೆಯಿಂದ 13 ನೇ ಪ್ರತಿವಾದಿ ಇವರು ಪ್ರತಿವಾದಿ ನಂ.14, 14(ಸಿ) ಮತ್ತು ಪ್ರತಿವಾದಿ 1(ಎ)ರವರ ಖಾತೆಗೆ ಹಣ ಸಂದಾಯ ಮಾಡಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ನಾನು ಸದರಿ ದಾಖಲೆಗಳು ನ್ಯಾಯಾಲಯಕ್ಕೆ ಬಂದ ನಂತರ ಅವುಗಳನ್ನು ತೆಗೆಸಿ ಪರಿಶೀಲನೆ ಮಾಡಿರುವುದಿಲ್ಲ. ಅವುಗಳನ್ನು ಪರಿಶೀಲನೆ ಮಾಡಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿದಾರರು ಪರಿಶೀಲಿಸುವ ಕಾರಣವಿರಲಿಲ್ಲ ಎಂದು ಹೇಳುತ್ತಾರೆ. ವಾದ ಪತ್ರದಲ್ಲಿ 13 ನೇ ಪ್ರತಿವಾದಿ ಅವ್ಯವಹಾರ ಮಾಡಿರುತ್ತಾರೆ ಎಂದು ನಾನು ಆರೋಪ ಮಾಡಿದ್ದೇನೆ ಎಂದರೆ ಸರಿ. ಅದ ಕಾರಣ ಅವರ ಅಕೌಂಟ ಡಿಟೆಲ್ಸನ್ನು ಪಡೆದುಕೊಳ್ಳುವ ಜವಾಬ್ದಾರಿ ನನ್ನ ಮೇಲೆ ಇದ್ದು ಅದನ್ನು ನಿರ್ವಹಣೆ ಮಾಡಿಲ್ಲ ಎಂದರೆ

ಸರಿಯಲ್ಲ. ನಾನು ಅವರ ಜೊತೆಗೆ ಮಿಲಾಪಿಯಾಗಿರುವ ಕಾರಣ ಅವರಿಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯದಲ್ಲಿ ತರಿಸಲು ನಾನು ತಯಾರು ಇರುವುದಿಲ್ಲ ಎಂದರೆ ಸರಿಯಲ್ಲ.

13 ನೇ ಪ್ರತಿವಾದಿ 1965 ರಲ್ಲಿ ಗ್ಲಾಸವೇರ ಅಂಗಡಿ ಪ್ರಾರಂಭಿಸಿದ್ದರು ಎಂದರೆ ಸಾಕ್ಷಿದಾರರು ನನಗೆ ನಿಖರವಾದ ದಿನಾಂಕ ನೆನಪಿಲ್ಲ ಎಂದು ಹೇಳುತ್ತಾರೆ. ಸದರಿ ಅಂಗಡಿಯಲ್ಲಿ ಗ್ಲಾಸನ ವಸ್ತುಗಳು, ಕಪ್ಪು ಮತ್ತು ಸಾಸರ ಮಾತ್ರ ಮಾರಾಟ ಮಾಡುತ್ತಿದ್ದರು ಎಂದರೆ ನನಗೆ ನಿಖರವಾಗಿ ಗೊತ್ತಿಲ್ಲ. ನಾನು 1974 ರಲ್ಲಿ ಕೆಲಸಕ್ಕೆ ಸೇರುವ ಮುನ್ನ ಧಾರವಾಡದಲ್ಲಿ ವಾಸವಾಗಿದ್ದೆ ಎಂದರೆ ಸರಿ. 1974 ರವರೆಗೆ ಧಾರವಾಡದಲ್ಲಿ ನಾನು ಇದ್ದ ಕಾರಣ 13 ನೇ ಪ್ರತಿವಾದಿಯ ಗ್ಲಾಸವೇರ ಅಂಗಡಿಯ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಗ್ಲಾಸವೇರ ಅಂಗಡಿಯಲ್ಲಿ ಲಕ್ಸುರಿ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಕಾರಣ ವ್ಯಾಪಾರ ಸ್ವಲ್ಪ ಕಡಿಮೆಯಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಂಗಡಿಗೆ ಸಂಬಂಧಿಸಿದ ಆದಾಯ ತೆರಿಗೆ ದಾಖಲೆ ಮತ್ತು ಇತರೇ ದಾಖಲೆಗಳನ್ನು ನೀವು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದಿರಾ ಎಂದು ಕೇಳಿದಾಗ ಸಾಕ್ಷಿದಾರರು ಅಂತಹ ದಾಖಲೆಗಳು ನಮಗೆ ಲಭ್ಯವಾಗಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ದಾಖಲೆಗಳನ್ನು ಪಡೆಯಲು ನಾನು ಪ್ರಯತ್ನ ಮಾಡಿದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ನಿ.ಡಿ.11 ಮತ್ತು 12 ರಲ್ಲಿ ಇರುವ ಮೊತ್ತ 13 ನೇ ಪ್ರತಿವಾದಿ ಅವ್ಯವಹಾರ ಮಾಡಿದಂತ ಹಣವಿರುತ್ತದೆ ಎಂದರೆ ಸರಿಯಲ್ಲ. ಆದ ಕಾರಣ ನಾನು ವಾದ ಪತ್ರದಲ್ಲಿ 13 ನೇ ಪ್ರತಿವಾದಿ ಅವ್ಯವಹಾರ ಮಾಡಿದ್ದಾನೆ ಎಂದು ಸುಳ್ಳು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರದ ಪ್ರಕಾರ ಪ್ರತಿವಾದಿ 9 ಮತ್ತು 13 ಅವ್ಯವಹಾರ ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ ನಂ.9 ಮತ್ತು 13 ಇವರು ಏನೂ ತಕರಾರು ಸಲ್ಲಿಸಿರುತ್ತಾರೆ ಎಂದು ನಾನು ನೋಡಿಲ್ಲ.

ಸಾಕ್ಷಿದಾರರಿಗೆ 13 ನೇ ಪ್ರತಿವಾದಿಯ ಪ್ರತಿವಾದ ಪತ್ರ ತೋರಿಸಲಾಗಿ ಅದರಲ್ಲಿ 13 ನೇ ಪ್ರತಿವಾದಿ ನಾನು ಮಾಡಿದಂತ ಆರೋಪಗಳನ್ನು ಸಂಪೂರ್ಣವಾಗಿ ಒಪ್ಪಿಕೊಂಡಿರುತ್ತಾರೆ ಎಂದರೆ ಸರಿ. 9 ನೇ ಪ್ರತಿವಾದಿ ತಮ್ಮ ಪ್ರತಿವಾದ ಪತ್ರದಲ್ಲಿ ತಾವು ಏನೂ ಮಾಡಿಲ್ಲ, 13 ನೇ ಪ್ರತಿವಾದಿ ಮಾತ್ರ

ಅವ್ಯವಹಾರ ಮಾಡಿದ್ದಾರೆ ಎಂದು ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಬಾಡಿಗೆದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇನೆ, ಅವರು ಸಲ್ಲಿಸಿದ ಪ್ರತಿವಾದ ಪತ್ರ ನೋಡಿಲ್ಲ. ಬಾಡಿಗೆದಾರರು 2006 ನೇ ಇಸ್ವಿಯವರೆಗೆ ಬಾಡಿಗೆ ಮೊತ್ತವನ್ನು 13 ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದರ ಪ್ರಕಾರ 13 ನೇ ಪ್ರತಿವಾದಿ ಮಾತ್ರ ಬಾಡಿಗೆ ಹಣವನ್ನು ಸ್ವೀಕರಿಸಿ ಅವ್ಯವಹಾರ ಮಾಡಿರುತ್ತಾರೆ, 9 ನೇ ಪ್ರತಿವಾದಿ ಯಾವುದೇ ಅವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 13 ನೇದವರ ಬ್ಯಾಂಕುಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಈಗ ನ್ಯಾಯಾಲಯದಲ್ಲಿ ತರಿಸಿರುವ ಕಾರ್ಪೋರೇಷನ ಬ್ಯಾಂಕನ ದಾಖಲೆ ಹೊರತು ಪಡಿಸಿ 13 ನೇ ಪ್ರತಿವಾದಿ ತನ್ನ ಅವ್ಯವಹಾರದಿಂದ ಸಂಪಾದನೆ ಮಾಡಿದ ಹಣವನ್ನು ಮಹಾರಾಷ್ಟ್ರ ಅಪೆಕ್ಸ ಬ್ಯಾಂಕ ಹಾಗೂ ರತ್ನಾಕರ ಬ್ಯಾಂಕ ಹಾಗೂ ಕರ್ನಾಟಕ ನೀರಾವರಿ ನಿಗಮದಲ್ಲಿ ಜಮೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಬ್ಯಾಂಕಿನ ದಾಖಲೆಗಳನ್ನು ತರಿಸಲು ನಾನು ಪ್ರಯತ್ನ ಮಾಡಿಲ್ಲ. 13 ನೇ ಪ್ರತಿವಾದಿ ನನ್ನ ಸಹೋದರವಿರುವ ಕಾರಣ ನಾನು ಸದರಿ ದಾಖಲೆಗಳನ್ನು ತರಿಸಲು ಪ್ರಯತ್ನಪಟ್ಟಿಲ್ಲ ಎಂದರೆ ಸರಿಯಲ್ಲ.

ದಾವಾ ಅನುಕ್ರಮ 12 ನೇ ಆಸ್ತಿ ಸಿಟಿಎಸ್ ನಂ.216 ನ್ನು ಬೇಕಂತಲೆ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸದರಿ ಆಸ್ತಿ 1959 ರಲ್ಲಿ ಖರೀದಿಯಾಗಿರುತ್ತದೆ ಎಂದರೆ ಇರಬಹುದು ಎಂದು ಹೇಳುತ್ತಾರೆ. ಆ ಸಮಯದಲ್ಲಿ 13 ನೇ ಪ್ರತಿವಾದಿ 22-23 ವರ್ಷದವನು ಆಗಿದ್ದರು ಎಂದರೆ ಸಾಕ್ಷಿದಾರರು ಇರಬಹುದು ಎಂದು ಹೇಳುತ್ತಾರೆ. ಆ ಸಮಯದಲ್ಲಿ ಅವರು ವಿದ್ಯಾಭ್ಯಾಸ ಮಾಡುತ್ತಿದ್ದರು ಮತ್ತು ಅವರಿಗೆ ಸ್ವಂತ ಆದಾಯವಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು 13 ನೇ ಪ್ರತಿವಾದಿಯ ತಂದೆ ಮಾಧವರಾವ ಇವರ ಹಣವನ್ನು ಉಪಯೋಗಿಸಿ ಖರೀದಿ ಹಿಡಿದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗೆ ಸಂಬಂಧಿಸಿ ಖರೀದಿ ಪತ್ರ ಅಥವಾ ಮ್ಯುಟೇಶನ ಪತ್ರ ಹಾಜರುಪಡಿಸಿಲ್ಲ. ಸದರಿ ದಾಖಲೆಗಳನ್ನು ಹಾಜರುಪಡಿಸಿದರೆ ಸತ್ಯ ಸಂಗತಿ ಹೊರಗೆ ಬರುತ್ತದೆ ಎಂದು ದುರುದ್ದೇಶದಿಂದ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಬಿ ಶೆಡ್ಯೂಲನಲ್ಲಿ ಅನುಕ್ರಮ

ಆಸ್ತಿ 3 ರಿಂದ 11 ನೇದ್ದಗಳು ಮಾಧವರಾವ ರೇಗೆ ಇವರು ಲಿಲಾವಿನಲ್ಲಿ ಖರೀದಿ ಮಾಡಿದ ಆಸ್ತಿಗಳು ಇರುತ್ತವೆ ಎಂದರೆ ನನಗೆ ಮಾಹಿತಿ ಇಲ್ಲ. ಮಾಧವರಾವ ರೇಗೆರವರ ಉಳಿತಾಯದ ಹಣದಿಂದ ಶಂಕರರಾವ ಇವರು ಅನುಕ್ರಮ 1 ಮತ್ತು 2 ನೇ ಆಸ್ತಿ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅನುಕ್ರಮ 1 ರಿಂದ 11 ನೇ ಆಸ್ತಿಗಳ ಮ್ಯುಟೇಶನ ಪತ್ರ ಮತ್ತು ಖರೀದಿ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ದಾಖಲೆಗಳು ಸಾರ್ವಜನಿಕ ದಾಖಲೆಗಳು ಎಂದರೆ ನಿಜ. ಸರಕಾರಿ ಕಚೇರಿಯಿಂದ ಅವುಗಳನ್ನು ಪಡೆದುಕೊಂಡು ಹಾಜರುಪಡಿಸಬಹುದು ಎಂದರೆ ಸರಿ. ಉತಾರಗಳಲ್ಲಿ ನಿಮ್ಮ ಹಾಗೂ ನಿಮ್ಮತಂದೆಯ ಹೆಸರು ಹೇಗೆ ಬಂದಿರುತ್ತದೆ ಎಂದು ಕೇಳಿದಾಗ ಸಾಕ್ಷಿದಾರರು ಒಬ್ಬ ಮಂಗೇಶ ರೇಗೆ ಎನ್ನುವವರು ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದರು ಎಂದು ಹೇಳುತ್ತಾರೆ. ಹೆಸರು ದಾಖಲು ಮಾಡುವುದನ್ನು ಶಂಕರ ರೇಗೆ ಅವರಿಗೆ ಒಪ್ಪಿಗೆ ಇರಲಿಲ್ಲ ಅದನ್ನು ಬಲವಂತವಾಗಿ ಮಂಗೇಶ ರೇಗೆ ಇವರು ಮಾಡಿಸಿರುತ್ತಾರೆ ಎಂದರೆ ಸರಿ. ಶಂಕರ ರೇಗೆ ಇವರು ಸದರಿ ಆಸ್ತಿಗಳನ್ನು ಯಾವತ್ತು ಸಮಾನ ಹಕ್ಕುದಾರರಿಗೆ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಶಂಕರ ರೇಗೆ ಇವರಿಗೆ ಆದಾಯವಿದ್ದ ಬಗ್ಗೆ ಮತ್ತು ಅವರ ವ್ಯವಹಾರಕ್ಕೆ ಸಂಬಂಧಪಟ್ಟಂತ ಇರುವ ಯಾವುದೇ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ಅವರು ಏನಾದರೂ ವ್ಯಾಪಾರ ಮಾಡುತ್ತಿದ್ದರೆ ಆ ಬಗ್ಗೆ ಪೂರಕವಾದ ದಾಖಲೆಗಳು ಇರುತ್ತಿದ್ದವು ಎಂದರೆ ಸರಿ. ಸಾಕ್ಷಿದಾರರಿಗೆ ಒಂದು ದಾಖಲೆ ತೋರಿಸಲಾಗಿ ಅದರಲ್ಲಿ ಮಾಲೀಕರು ಎಂದು ಯಾರ ಹೆಸರು ಇರುತ್ತದೆ ಎಂದು ಕೇಳಿದಾಗ ಸಾಕ್ಷಿದಾರರು ಎಂ.ವಿ.ರೇಗೆ ಎಂದು ನಮೂದು ಮಾಡಿರುತ್ತಾರೆ ಎಂದು ಹೇಳುತ್ತಾರೆ. ಎಂ.ವಿ.ರೇಗೆ ಎಂದರೆ ಮಾಧವರಾವ ರೇಗೆ ಎಂದರೆ ಸಾಕ್ಷಿದಾರರು ಇರಬಹುದು ಎಂದು ಹೇಳುತ್ತಾರೆ. ಸದರಿ ಎಂ.ವಿ.ರೇಗೆ ಮಾರುತಿ ಮೋಟಾರ್ಸ ಸರ್ವಿಸಸ್‌ನ ಮಾಲೀಕರು ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿದಾರರು ಒಪ್ಪಿಕೊಂಡ ಕಾರಣ ಅದನ್ನು ***ನಿ.ಡಿ.13*** ಎಂದು ಗುರುತಿಸಲಾಯಿತು. ಸದರಿ ದಾಖಲೆ 1934 ನೇ ಇಸ್ವಿಯದು ಇರುತ್ತದೆ ಎಂದರೆ ಸರಿ. ಶಂಕರರಾವ ಇವರಿಗೆ ಸಂಬಂಧಿಸಿದ ಇಂತಹ ದಾಖಲೆಗಳನ್ನು ನೀವೆನಾದರೂ

ಹಾಜರುಪಡಿಸಿದ್ದಿರಾ ಎಂದು ಕೇಳಿದಾಗ ಸಾಕ್ಷಿದಾರರು ಇಂತಹ ಯಾವುದೇ ದಾಖಲೆಗಳು ಲಭ್ಯವಿರಲಿಲ್ಲ ಎಂದು ಹೇಳುತ್ತಾರೆ. ಮಂಗೇಶ ರೇಗೆ ಇವರು ಕುಟುಂಬದ ಕರ್ತ ಇರುತ್ತಿದ್ದರು ಎಂದು ನಾನು ದಾವಾ ಪತ್ರದಲ್ಲಿ ಬರೆಸಿರುವುದಿಲ್ಲ. ಈಗ ಎಲ್ಲ ದಾಖಲೆಗಳನ್ನು ನೋಡಿ ಸುಳ್ಳು ಕಥೆಯನ್ನು ಕಟ್ಟುತ್ತಿದ್ದೇನೆ ಎಂದರೆ ಸರಿಯಲ್ಲ. ಇಂತಹ ದಾಖಲೆಗಳನ್ನು ಹಾಜರುಪಡಿಸಿದರೆ ಸತ್ಯಸಂಗತಿ ಹೊರಗೆ ಬರುತ್ತದೆ ಎಂದು ಬೇಕಂತಲೆ ಅಂತಹ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾದಾಸ್ತಿಗಳು ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿದಾರರು ಅವು ಒಟ್ಟು ಕುಟುಂಬದ ಆಸ್ತಿಗಳು ಇರುವುದಿಲ್ಲ ಎಂದು ಹೇಳುತ್ತಾರೆ. ಒಟ್ಟು ಕುಟುಂಬದ ವ್ಯಾಪಾರದ ಬಗ್ಗೆ ಕೂಡಾ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿದಾರರು ಸೂಕ್ತ ಸಮಯದಲ್ಲಿ ಹಾಜರುಪಡಿಸುತ್ತೇವೆ ಎಂದು ಹೇಳುತ್ತಾರೆ. ಇಲ್ಲಿಯವರೆಗೂ ಅಂತಹ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಬಿ ಶ್ಯೆಡೂಲನ 1 ರಿಂದ 12 ನೇ ಆಸ್ತಿಯ ಮಾಧವರಾವ ರೇಗೆ ಇವರಿಗೆ ಮಾತ್ರ ಸಂಬಂಧಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಸಿ ಶೆಡ್ಯೂಲ 4 ನೇ ಅನುಕ್ರಮ ಆಸ್ತಿಯನ್ನು 2000 ನೇ ಇಸ್ವಿಯಲ್ಲಿ ಖರೀದಿ ಮಾಡಲಾಗಿರುತ್ತದೆ ಎಂದರೆ ಸಾಕ್ಷಿದಾರರು ಇರಬಹುದು ಎಂದು ಹೇಳುತ್ತಾರೆ. ಸದರಿ ಆಸ್ತಿಯನ್ನು 9 ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಅದನ್ನು ಜಂಟಿಯಾಗಿ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಆಸ್ತಿಯನ್ನು ಶ್ರೀಮತಿ ಆಶಾ ಇವರಿಂದ ಖರೀದಿ ಮಾಡಿರುತ್ತಾರೆ. ಅದನ್ನು 12 ಲಕ್ಷ ರೂಪಾಯಿಗೆ ಖರೀದಿ ಮಾಡಿರುತ್ತಾರೆ. ಅದರಲ್ಲಿ 10 ಲಕ್ಷ ರೂಪಾಯಿ ಕೆನರಾ ಬ್ಯಾಂಕಿನವರು ಸಾಲ ನೀಡಿರುತ್ತಾರೆ ಎಂದರೆ ಸರಿ. 2 ಲಕ್ಷ ರೂಪಾಯಿ ಹಣವನ್ನು ಜಗದೀಶ ರೇಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಒಟ್ಟು ಕುಟುಂಬದ ಹಣದಿಂದ 2 ಲಕ್ಷ ರೂಪಾಯಿ ಹಣವನ್ನು ಕೊಡಲಾಗಿರುತ್ತದೆ ಎಂದು ಹೇಳುತ್ತಾರೆ. ಆ ಬಗ್ಗೆ ಯಾವುದಾದರೆ ದಾಖಲೆ ಹಾಜರುಪಡಿಸಿದ್ದಾರೆ ಎಂದರೆ ಸಾಕ್ಷಿದಾರರು ಹಾಜರುಪಡಿಸುತ್ತೇವೆ ಎಂದು ಹೇಳುತ್ತಾರೆ. 9 ನೇ ಪ್ರತಿವಾದಿ ರೇಗೆ ಮೋಟಾರ್ಸ ಸರ್ವಿಸಸ್ ಸಾವಿರ ಅಟೋಮೊಬೈಲ ಬಿಜಿನೆಸ ನಡೆಸುತ್ತಿದ್ದರು ಎಂದರೆ ಸರಿಯಲ್ಲ.

ಅವರಿಗೆ ಸದರಿ ಬಿಜಿನೆಸದಿಂದ ಬಂದಂತಹ ಹಣದಿಂದ ಸದರಿ ಆಸ್ತಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಹಿಡಿಯಲು ಸ್ಟಾಂಪ ಡ್ಯೂಟಿ ಮತ್ತು ಇತರೇ ಖರ್ಚುಗಳು ಸೇರಿ 2 ಲಕ್ಷ ರೂಪಾಯಿ ಬಂದಿರುತ್ತದೆ ಎಂದರೆ ಸಾಕ್ಷಿದಾರರು ಇರಬಹುದು ಎಂದುಹೇಳುತ್ತಾರೆ. ಸದರಿ ಹಣವನ್ನು 9ನೇ ಪ್ರತಿವಾದಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎಂದು ಹೇಳುತ್ತರೆ. ಕೆನರಾ ಬ್ಯಾಂಕಿನಿಂದ ಪಡೆದ ಸಾಲವನ್ನು 9ನೇ ಪ್ರತಿವಾದಿ ಮರುಪಾವತಿ ಮಾಡಿರುತ್ತಾರೆ ಎಂದರೆ ಮಾಡಿರಬಹುದು ಎಂದು ಹೇಳುತ್ತಾರೆ. ಈ ಎಲ್ಲ ಅಸ್ತಿಗಳನ್ನು ಖರೀದಿ ಹಿಡಿಯುಲು ನಾನು ಹಣ ಸಂದಾಯ ಮಾಡಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ಸಾಲ ಪಡೆಯಲು ಸಹಾಯ ಮಾಡಿದ್ದೇನೆ ಎಂದು ಹೇಳುತ್ತಾರೆ. 9ನೇ ಪ್ರತಿವಾದಿಗೆ ಆ ಸಮಯದಲ್ಲಿ 65 ವರ್ಷ ವಯಸ್ಸಾಗಿದ್ದ ಕಾರಣ ಅವರಿಗೆ ಸಾಲ ಸಿಗುತ್ತಿರಲಿಲ್ಲ ಆದ ಕಾರಣ ನನ್ನ ಹೆಸರನ್ನು ಅದರಲ್ಲಿ ಸೇರಿಸಲಾಗಿದ್ದು, ಸಾಲ ಮರುಪಾವತಿಯಾದ ನಂತರ ನನ್ನ ಹೆಸರನ್ನು ಕಡಿಮೆ ಮಾಡಲು ನಾನು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ ಸದರಿ ಸಾಲದ ಮರುಪಾವತಿ ಮಾಡಿದ ರಶೀದಿಗಳನ್ನು ತೋರಿಸಲಾಗಿ ಸಾಕ್ಷಿದಾರರು ಅವುಗಳನ್ನು ಒಪ್ಪಿಕೊಂಡ ಕಾರಣ ಅವುಗಳನ್ನು ಒಟ್ಟಾಗಿ ***ನಿ.ಡಿ.14*** ಮತ್ತು ಬ್ಯಾಂಕ ಸ್ಟೇಟಮೆಂಟನ್ನು ***ನಿ.ಡಿ.15*** ಎಂದು ಗುರುತಿಸಲಾಯಿತು. 5 ಲಕ್ಷ ರೂಪಾಯಿ ಸಾಲವನ್ನು ಜಗದೀಶ ರೇಗೆ ಇವರು ಮತ್ತು 10 ಲಕ್ಷ ರೂಪಾಯಿ ಹಣವನ್ನು ಅವರ ಮಗ ಸಾಲ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಾಲ ಕಟಬಾಕಿ ಆದಾಗ ನನ್ನ ಹಾಗೂ ಜಗದೀಶ ರೇಗೆ ವಿರುದ್ದ ಕೇಸು ಹೂಡಿದ್ದರು ಎಂದರೆ ಸರಿ. ನಾನು ಆ ಕೇಸಿನಲ್ಲಿ ಪ್ರತಿವಾದ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿ. ಅದರಲ್ಲಿ ನೀವು ಸದರಿ ಆಸ್ತಿಯನ್ನು ಮಾರಾಟ ಮಾಡಿ ಉಳಿದ ಮೊತ್ತವನ್ನು ನನಗೆ ವಾಪಸ್ಸು ಕೊಡಬೇಕೆಂದು ಬರೆಸಿದ್ದೆ. ಸದರಿ ಆಸ್ತಿಯಲ್ಲಿ ನನಗೆ ಯಾವುದೇ ಹೂಡಿಕೆ ಇಲ್ಲದ ಕಾರಣ ನಾನು ಆ ರೀತಿ ಪ್ರತಿವಾದ ಪತ್ರದಲ್ಲಿ ಬರೆದಿದ್ದೇನೆ ಎಂದರೆ ಸರಿಯಲ್ಲ. ದಾಖಲೆಯಲ್ಲಿ ನನ್ನಹೆಸರು ಇರುವುದನ್ನು ದುರುಪಯೋಗ ಪಡಿಸಿಕೊಂಡು ಸದರಿ ಆಸ್ತಿಯಲ್ಲಿ ನಾನು ಭಾಗ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಿ ಶೆಡ್ಯೂಲನ 4ನೇ ಅನುಕ್ರಮ ಆಸ್ತಿ 9ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

ಸಿ ಶೆಡ್ಯೂಲನ 1 ರಿಂದ 3 ನೇ ಅನುಕ್ರಮ ಆಸ್ತಿಗಳ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದಿರಾ ಎಂದು ಕೇಳಿದಾಗ ಸಾಕ್ಷಿದಾರರು ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಅವುಗಳಲ್ಲಿ ಮಾರಾಟ ಮಾಡಿದ ಬಗ್ಗೆ ದಾಖಲೆಗಳನ್ನು ಕೂಡಾ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿದಾರರು ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ನಾನು ದಾವಾಪತ್ರದಲ್ಲಿ ಹೇಳಿದಂತೆ ಮಾಧವರಾವ ಮತ್ತು ಶಂಕರರಾವರ ಒಟ್ಟು ಕುಟುಂಬ ಈ ಹಿಂದೆ ಕೂಡಾ ಮತ್ತು ಈಗಲೂ ಕೂಡಾ ಅಸ್ತಿತ್ವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಪತ್ರದಲ್ಲಿ ಹೇಳಿದಂತೆ ಒಟ್ಟು ಕುಟುಂಬದ ವ್ಯವಹಾರ ಕೂಡಾ ಇರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲ ಆಸ್ತಿಗಳು ಮಾಧವರಾವ ರೇಗೆ ಇವರ ಹೆಸರಿನಲ್ಲಿದ್ದು, ಅವರು ತೀರಿಕೊಂಡ ನಂತರ ಶಂಕರರಾವ ರೇಗೆರವರ ಹೆಸರು ದಾಖಲೆಗಳಲ್ಲಿ ಕೇವಲ ಆಸ್ತಿಗಳನ್ನು ನೋಡಿಕೊಳ್ಳಲು ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಮಾಧವರಾವ ರೇಗೆರವರ ಮಕ್ಕಳು ಚಿಕ್ಕವರು ಇದ್ದ ಕಾರಣ ಶಂಕರರಾವ ಇವರು ಎಲ್ಲ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

***ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಪ್ರತಿವಾದಿ ನಂ.5, 10 ಮತ್ತು 21 ಪರ ವಕೀಲರ ಮನವಿಯ ಮೇರೆಗೆ ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.